# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 641 (705) |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಎಂ.ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |
| ಉತ್ತರಿಸುವ ದಿನಾಂಕ | : | 21.08.2026 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಬೃಹತ್ ಕೈಗಾರಿಕೆ ಇಲಾಖೆಯ ವತಿಯಿಂದ ರೂಪಿಸಲಾಗಿರುವ ಕೈಗಾರಿಕಾ ನೀತಿ 2025-30ರಡಿ ಫೆಬ್ರುವರಿ-2025 ರಿಂದ ಇಲ್ಲಿಯವರೆಗೆ ಎಷ್ಟು ಹೂಡಿಕೆ ಆಕರ್ಷಿಸಲಾಗಿದೆ; (ವಿವರ ನೀಡುವುದು) (ಯಾವ ಯಾವ ರಾಜ್ಯ/ರಾಷ್ಟ್ರಗಳಿಂದ ಹೂಡಿಕೆ ಆಕರ್ಷಿಸಲಾಗಿದೆ ಮತ್ತು ಎಷ್ಟು ಮೊತ್ತ ಆಕರ್ಷಿಸಲಾಗಿದೆ) | ಫೆಬ್ರುವರಿ-2025 ರಿಂದ ಇಲ್ಲಿಯವರೆಗೆ (2026 ನೇ ಸಾಲಿನ ಜುಲೈ ಮಾಹೆಯ ಅಂತ್ಯದವರೆಗೆ) ಒಟ್ಟು 629 ಯೋಜನೆಗಳಿಗೆ ಅನುಮೋದನೆ ನೀಡಲಾಗಿದ್ದು, ಇವುಗಳಿಂದ ಒಟ್ಟು ರೂ.1,05,170.88 ಕೋಟಿ ಬಂಡವಾಳ ಹೂಡಿಕೆ ನಿರೀಕ್ಷಿಸಲಾಗಿದೆ.<br><br>ಮುಂದುವರೆದು, ಜಪಾನ್, ಅಮೇರಿಕಾ, ಜರ್ಮನಿ, ಫ್ರಾನ್ಸ್, ಪೋಲೆಂಡ್, ಸ್ವೀಡನ್ ಮುಂತಾದ ರಾಷ್ಟ್ರಗಳಿಂದ ಮತ್ತು ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಪಂಜಾಬ್, ಒರಿಸ್ಸಾ, ಉತ್ತರಪ್ರದೇಶ, ಪಶ್ಚಿಮ ಬಂಗಾಳ, ಕೇರಳ, ಗುಜರಾತ್ ಮತ್ತು ದೆಹಲಿ ಮುಂತಾದ ರಾಜ್ಯಗಳಿಂದ ಹೂಡಿಕೆಯನ್ನು ಆಕರ್ಷಿಸಲಾಗಿದೆ. |
| ಆ | ಸದರಿ ನೀತಿಯಡಿ ಫೆಬ್ರುವರಿ-2025 ರಿಂದ ಇಲ್ಲಿಯವರೆಗೆ ಎಷ್ಟು ಉದ್ಯೋಗವಕಾಶಗಳನ್ನು ಸೃಜಿಸಲಾಗಿದೆ; | ಫೆಬ್ರುವರಿ-2025 ರಿಂದ ಇಲ್ಲಿಯವರೆಗೆ (2026ನೇ ಸಾಲಿನ ಜುಲೈ ಮಾಹೆಯ ಅಂತ್ಯದವರೆಗೆ) ಅನುಮೋದನೆಯಾದ ಒಟ್ಟು 629 ಯೋಜನೆಗಳಿಂದ ಒಟ್ಟು 2,04,083 ಉದ್ಯೋಗ ಸೃಜನೆಯಾಗಲಿದೆ. |
| ಇ | ಕೈಗಾರಿಕಾ ನೀತಿ 2025-30ರಡಿ ಫೆಬ್ರುವರಿ-2025 ರಿಂದ ಇಲ್ಲಿಯವರೆಗೆ ಎಷ್ಟು ನವೋದ್ಯಮಗಳನ್ನು ಸ್ಥಾಪಿಸಲಾಗಿದೆ ಮತ್ತು ಬೆಂಗಳೂರನ್ನು ಹೊರತುಪಡಿಸಿ ಇತರೇ ಜಿಲ್ಲೆಗಳಲ್ಲಿ ಎಷ್ಟು ನವೋದ್ಯಮಗಳು ಪ್ರಾರಂಭಗೊಂಡಿವೆ; (ಮಾಹಿತಿ ನೀಡುವುದು) | ಕರ್ನಾಟಕ ನವೋದ್ಯಮ ನೀತಿ 2025-30 ರಡಿ ಫೆಬ್ರುವರಿ-2025 ರಿಂದ ಇಲ್ಲಿಯವರೆಗೆ 703 ನವೋದ್ಯಮಗಳು ಕರ್ನಾಟಕ ನವೋದ್ಯಮ ಕೋಶದಲ್ಲಿ ನೋಂದಣಿಯಾಗಿರುತ್ತವೆ.<br><br>ಬೆಂಗಳೂರನ್ನು ಹೊರತುಪಡಿಸಿ ಇತರೇ ಜಿಲ್ಲೆಗಳಿಂದ ನೋಂದಣಿಯಾದ ಮಾಹಿತಿಯನ್ನು **ಅನುಬಂಧದಲ್ಲಿ** ಒದಗಿಸಿದೆ. |
| ಈ | ಈ ನೀತಿಯಡಿ ಹೊಸ ಹೂಡಿಕೆ ವಲಯಗಳನ್ನು ಯೋಜಿಸಲಾಗಿದೆಯೇ; ಇದ್ದಲ್ಲಿ, ಎಷ್ಟು ಹೂಡಿಕೆ ವಲಯಗಳನ್ನು ಪ್ರಾರಂಭಿಸಲಾಗುವುದು ಮತ್ತು ಈ ಯೋಜನೆಗೆ ಬೇಕಾಗಿರುವ ಒಟ್ಟು ಜಮೀನು ಎಷ್ಟು? | ವಲಯದ ನಿರ್ದಿಷ್ಟ ಕ್ಲಸ್ಟರ್‌ಗಳನ್ನು ಈ ಕೆಳಕಂಡಂತೆ ಕಲ್ಪಿಸಲಾಗಿದೆ.<br>• ಎಲೆಕ್ಟ್ರಾನಿಕ್ಸ್ ಮ್ಯಾನುಫ್ಯಾಕ್ಚರಿಂಗ್ ಕ್ಲಸ್ಟರ್‌ಗಳು: ಕೋಚನಹಳ್ಳಿ ಮೈಸೂರು. ಕೋಟೂರು-ಬೇಲೂರು - ಧಾರವಾಡ ಮತ್ತು ಆದಿನಾರಾಯಣ ಹೊಸಹಳ್ಳಿ, ಬೆಂಗಳೂರು ಗ್ರಾಮಾಂತರ<br>• ಇವಿ ಕ್ಲಸ್ಟರ್‌ಗಳು- ಚಿಕ್ಕಮಂಗಳೂರು -ಧಾರವಾಡ, ಗೌರಿಬಿದನೂರು - ಚಿಕ್ಕಬಳ್ಳಾಪುರ, ಹಾರೋಹಳ್ಳಿ - ರಾಮನಗರ |

| | | |
|---|---|---|
| | | • ಫಾರ್ಮಾ ಕ್ಲಸ್ಟರ್ - ಬೆಂಗಳೂರು ಗ್ರಾಮಾಂತರ, ಯಾದಗಿರಿ, ಚಿತ್ರದುರ್ಗ<br>• ಉಕ್ಕು ಸಂಸ್ಕರಣೆ - ಬಳ್ಳಾರಿ<br>• ಜವಳಿ ಮತ್ತು ಆಹಾರ ಸಂಸ್ಕರಣೆ - ಗುಲ್ಬರ್ಗ<br>• ಆಹಾರ ಸಂಸ್ಕರಣೆ, ನವೀಕರಿಸಬಹುದಾದ ಮತ್ತು ಸೌರ ಕೋಶಗಳು - ವಿಜಯಪುರ<br>• ಕನ್ಸ್ಯೂಮರ್ ಡ್ಯೂರಬಲ್ಸ್ & ಗೂಡ್ಸ್ ಮತ್ತು FMCG - ಹುಬ್ಬಳ್ಳಿ ಧಾರವಾಡ |

ಕಡತ ಸಂಖ್ಯೆ. ಸಿಐ 217 ಎಸ್‌ಪಿಐ 2026

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು

## ಅನುಬಂಧ

**ಪ್ರಶ್ನೆ ಸಂಖ್ಯೆ: 641 (705) ಉಪ ಪ್ರಶ್ನೆಯಾದ (ಇ) ಗೆ ಮಾಹಿತಿ**

| ಕ್ರಮ ಸಂಖ್ಯೆ | ಜಿಲ್ಲೆ | ವರ್ಷ 2025-26 |
|---|---|---|
| 1 | ಬಾಗಲಕೋಟೆ | 3 |
| 2 | ಬಳ್ಳಾರಿ | 4 |
| 3 | ಬೆಳಗಾವಿ | 9 |
| 4 | ಬೆಂಗಳೂರು ಗ್ರಾಮೀಣ | 13 |
| 5 | ಬೀದರ್ | 9 |
| 6 | ಚಾಮರಾಜನಗರ | 1 |
| 7 | ಚಿಕ್ಕಬಳ್ಳಾಪುರ | 1 |
| 8 | ಚಿಕ್ಕಮಗಳೂರು | 3 |
| 9 | ಚಿತ್ರದುರ್ಗ | 2 |
| 10 | ದಕ್ಷಿಣ ಕನ್ನಡ | 16 |
| 11 | ದಾವಣಗೆರೆ | 4 |
| 12 | ಧಾರವಾಡ | 20 |
| 13 | ಗದಗ | 5 |
| 14 | ಹಾಸನ | 8 |
| 15 | ಹಾವೇರಿ | 1 |
| 16 | ಕಲಬುರ್ಗಿ | 7 |
| 17 | ಕೊಡಗು | 5 |
| 18 | ಕೋಲಾರ | 2 |
| 19 | ಕೊಪ್ಪಳ | 3 |
| 20 | ಮಂಡ್ಯ | 3 |
| 21 | ಮೈಸೂರು | 33 |
| 22 | ರಾಯಚೂರು | 5 |
| 23 | ರಾಮನಗರ | 3 |
| 24 | ಶಿವಮೊಗ್ಗ | 4 |
| 25 | ತುಮಕೂರು | 5 |
| 26 | ಉಡುಪಿ | 6 |
| 27 | ಉತ್ತರ ಕನ್ನಡ | 11 |
| 28 | ವಿಜಯಪುರ | 3 |
| 29 | ವಿಜಯನಗರ | - |
| 30 | ಯಾದಗಿರಿ | 3 |
| | **ಒಟ್ಟು** | **192** |

Scanned with OKEN Scanner